ಅಪ್ಪಿ ತಪ್ಪಿ ಕಾಗೆ ಕೂಟ ಕಂಡರೆ ಯಾರೋ ಸತ್ತರೆನ್ನುವ ಸುಳ್ಳು ವದಂತಿ ಹಬ್ಬಿಸಿ ಪರಿಹಾರ ಕಂಡುಕೊಳ್ಳುವುದು ಕೆಲವು ಪ್ರದೇಶಗಳಲ್ಲಿ ರೂಢಿಯಲ್ಲಿದೆಯಂತೆ. ಸಣ್ಣದೊಂದು ಮಳೆ ಬಿದ್ದು ನೆಲ ತಂಪಾದರೆ ಸಾಕು, ನಾನು ದಿನವೂ ತಪ್ಪದೆ ವಾಕಿಂಗ್ ಮಾಡುವ ಪಾರ್ಕಿನ ಕಿರುದಾರಿಯಲ್ಲಿ ಹದಿದ ಕಲ್ಲುಗಳೆಡೆಯಿಂದ ತುಪತುಪನೆ ಮೇಲೇರುವ ರೆಕ್ಕೆ ಬಂದ ಇರುವೆಗಳೆಂದರೆ ಕಾಗೆ ಬಳಗಕ್ಕೆ ಹಬ್ಬದೂಟ ಸಿಕ್ಕಿದ ಹಾಗೆ. ನಡೆದಾಡುವ ಜನರನ್ನು ಲೆಕ್ಕಿಸದೆ ಅವು ಪುಷ್ಕಳ ಭೋಜನಕ್ಕಾಗಿ ರೊಂಯ್ಯನೆ ನೆಲಮಟ್ಟಕ್ಕೆ ಹಾರಿ ಬರುವುದು, ಎಲ್ಲಿ ಅವು ತಮ್ಮನ್ನು ತಗುಲಿಕೊಂಡು ಹಾರಿಬಿಡುತ್ತವೆಯೋ ಎಂದು ಜನ ಹೆದರಿ ಹೆದರಿ ನಡೆಯುವುದು ಮಾಮೂಲಿನ ಸಂಗತಿ. ಕಾಗೆಗಳ ಸ್ಪರ್ಶ ಅಂದರೆ ಜನಕ್ಕೆ ವಿಪರೀತದ ಭಯ. ಎಲ್ಲಿಗೋ ಹಾರುವ ಭರದಲ್ಲಿ ಕಾಗೆಯೇನಾದರೂ ಮೈಗೆ ತಗುಲಿಬಿಟ್ಟಿತೆಂದರೆ ಸಾಕ್ಷಾತ್ ಯಮನೇ ಸ್ಪರ್ಶಿಸಿದ ಅನುಭವ. ಅದಕ್ಕೆ ಮತ್ತೇನೇನೋ ಪರಿಹಾರದ ಮೊರೆ. ಸದ್ಯ, ವಿಪತ್ತುಗಳಿಗೆಲ್ಲಾ ಒಂದು ಪರಿಹಾರವಿದೆ ಅನ್ನುವುದು ಇಂತದನ್ನು ನಂಬುವ ಜನರ ಪುಣ್ಯ. ಆತಂಕಗೊಂಡ ಮನಸ್ಸಿಗೆ ಒಂದಲ್ಪ ಸಮಾಧಾನ, ಶಾಂತಿ. ಶನಿಯ ವಾಹನವಾದ ಈ ಕಾಕಾಸುರ ರಾಮನ ಬಾಣಕ್ಕೆ ಗುರಿಯಾಗಿ ಒಕ್ಕಣ್ಣಿನವನಾಗಿರುವುದರ ಕುರಿತು ರಾಮಾಯಣದಲ್ಲಿ ಒಂದು ಸ್ವಾರಸ್ಯದ ಕತೆ ಇದೆ. ನಿಜಕ್ಕೂ ಕಾಗೆಗೆ ಒಂದು ಕಣ್ಣು ಮಾತ್ರಾ ಕಾಣಿಸುವುದಾ ಎಂದು ಕೇಳಿದರೆ ಈ ವಿಷಯದಲ್ಲಿ ನನಗೆ ತಿಳಿವಳಿಕೆ ಇಲ್ಲ. ಏನೇ ಇರಲಿ, ಕೋಗಿಲೆಯ ಮೊಟ್ಟೆಯನ್ನು ಕಾವು ಕೊಟ್ಟು ಸಾಕುವ ವಿಶಾಲ ಹೃದಯದ ಕಾಕ ಸಂತತಿ ತನ್ನವರ ಬಗೆಗೆ ತೋರುವ ಅಭಿಮಾನ, ಕಳಕಳಿ ಮನುಷ್ಯ ಜಾತಿಗೆ ಆದರ್ಶಪ್ರಾಯ.

ಆಗೀಗ 'ಢಮಾರ್' ಎಂದು ಆನೆಪಟಾಕಿ ಹಚ್ಚಿದಂತಾ ಸದ್ದಾಗಿ, ಮರುಕ್ಷಣ ಕಿವಿ ಹೊಟ್ಟೆ ಹಾರಿ ಹೋಗುವಂತೆ ಕಾಕಸಂಕುಲ ಒಟ್ಟಿಗೆ ಹಾರಾಡುತ್ತಾ ಕಿರುಚಾಡತೊಡಗಿದುವು ಅಂದರೆ ಎಲೆಕ್ಟ್ರಿಕ್ ತಂತಿಯ ಮೇಲೆ ಕೂತ ಯಾವುದೋ ಕಾಗೆ ಆಘಾತಕ್ಕೆ ಒಳಗಾಗಿ ನೆಗೆದು ಬಿದ್ದಿದೆ ಅನ್ನುವುದು ಪೇಟೆಮಂದಿಗೆ ತಕ್ಷಣಕ್ಕೆ ಅರಿವಾಗುವ ಸತ್ಯ. ಕರೆಂಟು ಹೋಯ್ತೇನೋ ಎನ್ನುವ ಆತಂಕ. ಹೀಗೆನ್ನುವಾಗ ಪ್ರೈಮರಿಯಲ್ಲಿ ಓದಿದ ಒಂದು ಪದ್ಯದ ಸಣ್ಣ ತುಣುಕು ನೆನಪಾಗುತ್ತಿದೆ. ಬರೆದವರ್ಯಾರೋ ನೆನಪಾಗುತ್ತಿಲ್ಲ.

'ವಿದ್ಯುದಾಘಾತಕ್ಕೆ ಸಿಕ್ಕಿ ಸತ್ತಿದೆ ಕಾಗೆ,
ತಪ್ಪು ಮಾಡದ ವ್ಯಕ್ತಿ ಶಿಕ್ಷೆ ಪಡೆಯುವ ಹಾಗೆ...'

ಬೇರೆ ಸಂದರ್ಭಗಳಲ್ಲಿ, ಅಥವಾ ಹೆಚ್ಚಿನ ಸಂದರ್ಭಗಳಲ್ಲಿ ಅಪಶಕುನದ ಪಕ್ಷಿಯಾಗಿರುವ ಕಾಗೆ ತಿಥಿಯೂಟದ ಎಡೆ ಇಡುವ ಕಾಲದಲ್ಲಿ ಆ ಕಡೆ ತಲೆ ಹಾಕದೆ ಸತಾಯಿಸುವುದು ಒಂದು ಚೋದ್ಯ. ಅಲ್ಲೆಲ್ಲೋ ಮರದ ಮೇಲೆ ತಪಸ್ಸಿಗೆ ಕೂತ ಮುನಿಯಂತೆ ಕೂತಿರುವ ಕಾಕರಾಯ ಅಥವಾ ಕಾಕಪಡೆ ತಮ್ಮ ಪೂರ್ವಜರು ಆವಾಹನೆಗೊಂಡಿರುವ ಮಾಧ್ಯಮ ಎಂದು ನಂಬಿ, ಎಡೆ ಇಟ್ಟೊಡನೆ ಅವು ಹಾರಿ ಬರದಿದ್ದರೆ 'ಯಾಕೋ ಪೂರ್ವಜರು ತಮ್ಮ ಮೇಲೆ ಮುನಿದಿದ್ದಾರೆ' ಎಂದು ಭ್ರಮಿಸಿ, ಬೆಣ್ಣೆ ಹಚ್ಚಿ ಎನ್ನುವ ಹಾಗೆ 'ಕಾ... ಕಾ...' ಎಂದು ವಿಹ್ವಲ ದನಿಯಿಂದ ಅವುಗಳನ್ನು ಆಹ್ವಾನಿಸುವ ವೈಖರಿಯೇ ವೈಖರಿ. ಆವತ್ತಿನ ಭಕ್ಷ್ಯ, ಭೋಜ್ಯಗಳನ್ನು ತುಂಬಿಸಿದ ಬಾಳೆಲೆಯನ್ನು ಮನೆಯ ಮಾಡಿನ ಮೇಲೋ, ಚಪ್ಪರದ ಮೇಲೋ ಇಡುತ್ತಿದ್ದಂತೆ ಕಾಗೆಗಳು ಧಾವಿಸಿ ಬಂದರೆ ಹಿರಿಯರು ಸಂಪ್ರೀತರಾಗಿದ್ದಾರೆ ಎನ್ನುವ ಕೃತಾರ್ಥ ಭಾವನೆ ಅನುಭವಿಸಿ, ಪೂರ್ವಜರನ್ನು ಕಾಗೆಗಳ ರೂಪದಲ್ಲಿಯೇ ಕಲ್ಪಿಸಿಕೊಂಡಿರುವುದರ ಹಿಂದೆ